# ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001. ದೂರವಾಣಿ : 080-22224212

ಸಂಖ್ಯೆ : ಸಿಆಸುಇ 16 ಮಾಸ(ಅಮುಚು 3)2018 ದಿನಾಂಕ : 10-5-2018.

## ಪತ್ರಿಕಾ ಪ್ರಕಟಣೆ

## ಮೇ 12 ರಂದು ಸಾರ್ವತ್ರಿಕ ರಜೆ

**ಬೆಂಗಳೂರು, ಮೇ 10 :** ಕರ್ನಾಟಕ ವಿಧಾನ ಸಭಾ ಚುನಾವಣೆ-2018 ರ ಅಂಗವಾಗಿ 2018 ರ ಮೇ 12 ರಂದು ಮತದಾನ ನಡೆಯಲಿದೆ. ಮತದಾರರು ಮತ ಚಲಾಯಿಸಲು ಅನುಕೂಲವಾಗುವಂತೆ ಎಲ್ಲಾ ಕೇಂದ್ರ ಹಾಗೂ ರಆಜ್ಯ ಸರ್ಕಾರಿ ಕಚೇರಿಗಳಗೆ, ಶಾಲಾ-ಕಾಲೇಜು, ವಿವಿಧ ಸಂಘ ಸಂಸ್ಥೆಗಳಗೆ ಹಾಗೂ ಖಾಸಗಿ ಸಂಸ್ಥೆಗಳಗೆ (ಅನುದಾನಿತ ಶಿಕ್ಷಣ ಸಂಸ್ಥೆ ಸೇರಿದಂತೆ) ಮೇ 12 ರಂದು ಸಾರ್ವತ್ರಿಕ ರಜೆಯನ್ನು ಸರ್ಕಾರ ಘೋಷಿಸಿದೆ.

ಮೇ 12 ರಂದು ಚುನಾವಣಾ ಕಾರ್ಯಗಳಗೆ ನಿಯೋಜಿಸಲ್ಪಟ್ಟಿರುವ ಎಲ್ಲಾ ಸರ್ಕಾರಿ ನೌಕರರು ಕರ್ತವ್ಯಕ್ಕೆ ಹಾಜರಾಗಬೇಕು. ಜೊತೆಗೆ ತುರ್ತು ಸೇವೆಗಳಗೆ ಸಾರ್ವತ್ರಿಕ ರಜೆ ಅನ್ವಯವಾಗುವುದಿಲ್ಲ.

ಸರ್ಕಾರಿ ಕಛೇರಿ ಹಾಗೂ ಸರ್ಕಾರಿ ಶಾಲೆ-ಕಾಲೇಜುಗಳಲ್ಲಿ ಮತಗಟ್ಟೆಯನ್ನು ಸ್ಥಾಪಿಸಿದ್ದಲ್ಲಿ 2018 ರ ಮೇ 11 ರಂದು (ಶುಕ್ರವಾರ) ಅಂತಹ ಶಾಲೆ-ಕಾಲೇಜು, ಸರ್ಕಾರಿ ಕಚೇರಿಗಳಗೆ ಮತಗಟ್ಟೆ ಪೂರ್ವ ತಯಾರಿಗಾಗಿ ರಜೆ ಘೋಷಿಸುವ ಬಗ್ಗೆ ಆಯಾ ಮತಕ್ಷೇತ್ರ ವ್ಯಾಪ್ತಿಯ ಚುನಾವಣಾಧಿಕಾರಿಗಳು ನಿರ್ಧಾರ ಕೈಗೊಳ್ಳಬಹುದಾಗಿದೆ. ಹಾಗೆಯೇ, ಮತ ಎಣಿಕೆ ದಿನದಂದು ಸಹ ಅವಶ್ಯಕತೆ ಇದ್ದಲ್ಲಿ ಮತ ಎಣಿಕೆ ನಡೆಯುವ ಸರ್ಕಾರಿ ಕಚೇರಿ ಇಲ್ಲವೆ ಶಾಲಾ-ಕಾಲೇಜುಗಳಗೆ ರಜೆ ಘೋಷಣೆ ಮಾಡಲು ಆಯಾ ಮತಕ್ಷೇತ್ರದ ಚುನಾವಣಾಧಿಕಾರಿಗಳೂ ಕ್ರಮ ತೆಗೆದುಕೊಳ್ಳಬಹುದಾಗಿದೆ.

**ಬ್ಯಾಂಕುಗಳಗೆ ರಜೆ** :- ಮತದಾನ ನಡೆಯುವ ದಿನದಂದು ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಕೃತ ಬ್ಯಾಂಕು, ಇತರೆ ಬ್ಯಾಂಕುಗಳು ಮತ್ತು ಇನ್ನಿತರ ಕಚೇರಿಗಳಗೆ ಅನ್ವಯಿಸಿದಂತೆ ನೆಗೋಷಿಯೇಟ್ ಇನ್‌ಸ್ಟ್ರುಮೆಂಟ್ ಆಕ್ಟ್-1881 ರ ಅನ್ವಯ ಸಾರ್ವತ್ರಿಕ ರಜೆಯನ್ನು ಘೋಷಿಸಿದೆ.

**ವೇತನ ಸಹಿತ ರಜೆ** :- ಯಾವುದೇ ವ್ಯವಹಾರಿಕ ಸಂಸ್ಥೆಗಳು, ಔದ್ಯಮಿಕ ಸಂಸ್ಥೆಗಳು ಅಥವಾ ಇನ್ನಿತರ ಸಆರ್ವಜನಿಕ ಸಂಸ್ಥೆಗಳಲ್ಲಿ ಖಾಯಂ ಮತ್ತು ದಿನಗೂಲಿ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಮತದಾನದ ದಿನ ವೇತನ ಸಹಿತ ರಜೆಗೆ ಅರ್ಹರಾಗಿರುತ್ತಾರೆ.

**ಕಾರ್ಮಿಕರಿಗೆ ವೇತನ ಸಹಿತ ರಜೆ** :- ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಾರ್ಖಾನೆ / ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ನೌಕರ ಮತದಾರರಿಗ ಮತ ಚಲಾಯಿಸಲು ಅನುಕೂಲವಾಗುವಂತೆ ಮೇ 12 ರಂದು ವೇತನ ಸಹಿತ ರಜೆಯನ್ನು ನೀಡುವಂತೆ ಎಲ್ಲ ನೋಂದಾಯಿತ ಕಾರ್ಖಾನೆಗಳ ಆಡಳಿತ ಮಂಡಳಗೆ ನಿರ್ದೇಶನ ನೀಡಲಾಗಿದೆ ಎಂದು ಕಾರ್ಖಾನೆಗಳು, ಬ್ರಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಪ್ರಕಟಣೆ ತಿಳಸಿದೆ.

*********

# ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001. ದೂರವಾಣಿ : 080-22224212

ಸಂಖ್ಯೆ : ಸಿಆಸುಇ 16 ಮಾಸ(ಅಮುಚು 3)2018 ದಿನಾಂಕ : 10-5-2018.

## ಪತ್ರಿಕಾ ಪ್ರಕಟಣೆ

## ಚುನಾವಣೆ ರಜೆ

**ಬೆಂಗಳೂರು, ಮೇ 10 :** ರಾಜ್ಯದಲ್ಲಿ ಚುನಾವಣೆ ನಡೆಯುವ ದಿನ 12-05-2018 (ಶನಿವಾರ) ರಂದು ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಾರ್ಖಾನೆ/ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ನೌಕರ ಮತದಾರರಿಗೆ ಮತ ಚಲಾಯಿಸಲು ಅವಕಾಶ ಮಾಡಿಕೊಡಬೇಕಾಗಿದೆ. ಪ್ರತಿ ಅರ್ಹ ಮತದಾರರಿಗೆ ಮತದಾನದ ದಿನಾಂಕದಂದು ವೇತನ ಸಹಿತ ರಜೆ ಮಂಜೂರು ಮಾಡುವುದು ಆಡಳಿತ ವರ್ಗದ ಕರ್ತವ್ಯವಾಗಿದೆ. ವಿಷಯವನ್ನು ಸಂಬಂಧಪಟ್ಟ ಎಲ್ಲಾ ನೋಂದಾಯಿತ ಕಾರ್ಖಾನೆಗಳ ಆಡಳಿತ ವರ್ಗದವರ ಆದ್ಯ ಗಮನಕ್ಕೆ ತರುತ್ತಾ ಅಂದು ತಪ್ಪದೇ ವೇತನ ಸಹಿತ ರಜೆ ಘೋಷಿಸಿ ಎಲ್ಲಾ ಅರ್ಹ ಕಾರ್ಮಿಕರು ಸಹ ಮತದಾನ ಮಾಡಿ ಅವರ ಮೂಲಭೂತ ಹಕ್ಕು ಚಲಾಯಿಸಲು ಅನುವು ಮಾಡಿಕೊಡಲು ಹಾಗೂ ಯಾವುದೇ ಕಾರ್ಖಾನೆಯು ನಿರಂತರ ಉತ್ಪಾದನೆಯಲ್ಲಿ ತೊಡಗುವುದು ಅನಿವಾರ್ಯವೆಂದು ಕಂಡುಬಂದ ಪಕ್ಷದಲ್ಲಿ ಪರ್ಯಾಯ ವ್ಯವಸ್ಥೆ ರೂಪಿಸಿಕೊಂಡು ಅಂತಹ ಉತ್ಪಾದನೆಗೆ ಸಂಬಂಧಪಟ್ಟ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಸಾಕಷ್ಟು ಕಾಲಾವಕಾಶ ಮಾಡಿಕೊಡಬೇಕೆಂದು ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

*********